# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು.

## ಸಿ.ಸಿ. 207/2024

ಫಿರ್ಯಾದುದಾರರುಃ ಸರ್ಕಾರದ ಪರ ಹುಣಸೂರು ಪಟ್ಟಣ ಪೊಲೀಸ್ ಠಾಣೆ,
ಹುಣಸೂರು, ಮೈಸೂರು ಜಿಲ್ಲೆ.

ವಿರುದ್ಧ

ಆರೋಪಿಗಳು

1. ಕುಮಾರಸ್ವಾಮಿ ಬಿನ್ ಸುರೇಶ,
ವಯಸ್ಸು 17 ವರ್ಷ,
(Juvenile Court)

2. ಬೀರೇಶ ಬಿನ್ ಸುರೇಶ,
ವಯಸ್ಸು 19 ವರ್ಷ,
ವಾಸಃ ಹೊಳೆ ದಾರಿ ಬೀದಿ, ಕಲ್ಕುಣಿಕೆ,
ಹುಣಸೂರು ಟೌನ್,
ಮೈಸೂರು ಜಿಲ್ಲೆ.

## ದೋಷಾರೋಪಣೆ

**ಶ್ರೀಮತಿ. ಜೈಬುನ್ನಿಸಾ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ**

ದಿನಾಂಕ 19.01.2024 ರಂದು ಸಾಯಂಕಾಲ 4.00 ಗಂಟೆಯ ಸಮಯದಲ್ಲಿ ಹುಣಸೂರು ಪಟ್ಟಣ ಪೊಲೀಸ್ ಠಾಣಾ ಸರಹದ್ದು, ಹುಣಸೂರು ಪಟ್ಟಣದ ಕಲ್ಕುಣಿಕೆಯ ಹೊಳೆದಾರಿ ಬೀದಿಯಲ್ಲಿ ಕಾನೂನು ಸಂಘರ್ಷಕ್ಕೆ ಒಳಗಾದ 1ನೇ ಆರೋಪಿಯು ಸಾಕ್ಷಿ-2ರವರ ವಾಸದ ಮನೆಗೆ ನುಗ್ಗಿ, ಸಾಕ್ಷಿ-1ರವರಿಗೆ ಬಾಯಿಗೆ ಬಂದತೆ ಸೂಳೆ ಮುಂಡೆ, ಲೋಫರ್ ಮುಂಡೆ ಎಂದು ಬೈದು, ಸಾಕ್ಷಿ-1ರವರ ಧರಿಸಿದ ನೈಟಿಯ ಮುಂಭಾಗವನ್ನು ಬಿಗಿಯಾಗಿ ಕೈಯಿಂದ ಹಿಡಿದುಕೊಂಡು ಧರಧರನೆ ಎಳೆದುಕೊಂಡು ಬಂದು ಸಾರ್ವಜಕನಿಕ ಸ್ಥಳವಾದ ಸಾಕ್ಷಿ-1ರವರ ವಾಸದ ಮನೆ ಮುಂದೆ ಕೆಳಕ್ಕೆ ಕೆಡವಿಕೊಂಡು ಕಾಲಿನಿಂದ ಹೊಟ್ಟೆಗೆ ಒದ್ದು ಕೈಯಿಂದ ಬಲಭಾಗದ ಕುತ್ತಿಗೆಗೆ ಹೊಡೆದು, ನೈಟಿಯನ್ನು ಹರಿದುಹಾಕುತ್ತಿದಾಗ, ಜಗಳ ಬಿಡಿಸಲು ಹೋದ

ಗಾಯಾಳುವಾದ ಸಾಕ್ಷಿ-2ರವರಿಗೆ 2ನೇ ಆರೋಪಿಯಾದ ನೀವು ಕೈಯಿಂದ ಮೈಕೈಗೆ ಹಾಗೂ ತುಟಿಗೆ ಹೊಡೆದು ರಕ್ತಗಾಯ ಮಾಡಿ ನೋವುಂಟು ಮಾಡಿರುತ್ತೀರಿ, ಇದು ಭಾರತೀಯ ದಂಡ ಸಂಹಿತೆ ಕಲಂ 323 ಸಹಕಲಂ 34 ರಡಿ ದಂಡನೀಯ ಅಪರಾಧವಾಗಿದ್ದು, ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮೇಲ್ಕಂಡ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದ್ದು, ಆರೋಪಿ ನೀಡಿದ ಉತ್ತರವನ್ನು ಹಾಗೆಯೇ ದಾಖಲಿಸಿಕೊಂಡಿದೆಯೆಂದು ಈ ಮೂಲಕ ದೃಢೀಕರಿಸುತ್ತೇನೆ.

**(ಜೈಬುನ್ನಿಸಾ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಹುಣಸೂರು.